

ರೋಲಿಂಗ್ ಶಟರ್ ಉಪಗ್ರಹವೊಂದು ಹಾರಿದಂತೆ ಮೇಲಕ್ಕೆ ಹಿಗ್ಗಿ ನಿಲ್ಲುತ್ತದೆ. ಗಾಜಿನೊಳಗಿರುವ ಹಲವು ಸ್ವೀಟಿನ ಟ್ರೇಗಳು ಇವಳ ಗಮನ ಸೆಳೆಯುತ್ತವೆ. 'ಮೈಸೂರು ಪಾಕು ಅರ್ಧ ಕಿಲೋ, ಇದೇನು ಹೊಸ ಕ್ರಾಫ್ಟ್ ಇದ್ದ ಹಾಗಿದೆಯಲ್ಲ', 'ಗೋಲ್ಡ್ ಬರ್ಫಿ' ಎನ್ನುತ್ತಾನೆ ಮಾಲೀಕ; ಹೇಗಿದೆ ಟೇಸ್ಟು, ಅಡ್ಡಿಯಿಲ್ಲ ತಾನೇ ಎನ್ನುತ್ತಾ ಪಾವು ಕಿಲೋ ಇರಲಿ, ಬ್ರೆಡ್ಡು ನಾಲ್ಕು ಪೌಂಡು, ರಸ್ಕು ಫ್ರೆಶ್ ಇದೆಯಲ್ವಾ' ಎನ್ನುತ್ತಾ ಎಲ್ಲವನ್ನು ಪ್ಯಾಕು ಮಾಡಿಸಿಕೊಂಡು ನಡೆದು ಹೋಗುವ ಮೊದಲು ಮೊದಲ ಬೋಣಿಯೆಂದು ತನ್ನ ಪರ್ಸಿನಿಂದ ಇಪ್ಪತ್ತು ರೂಪಾಯಿ ತೆಗೆದು ಕೊಡುತ್ತಾಳೆ. ಮಾಲೀಕ ಮರು ಮಾತಿಲ್ಲದೆ ಒಟ್ಟು ಬೆಲೆಯಲ್ಲಿ ಇಪ್ಪತ್ತು ರೂಪಾಯಿ ಕಡಿತಗೊಳಿಸಿ ಲೆಕ್ಕ ಪುಸ್ತಕದಲ್ಲಿ ಬರೆದುಕೊಳ್ಳುತ್ತಾನೆ. ಆ ಇಪ್ಪತ್ತು ರೂಪಾಯಿಯು ನೆನ್ನೆ ತರಕಾರಿ ಮಾರ್ಕೆಟ್ಟಿನಲ್ಲಿ ಇವಳಿಗೆ ಸಿಕ್ಕಿತ್ತು. ನೂರು ಗ್ರಾಂ ಬೀನ್ಸ್, ಹದಿಮೂರು ಟೊಮೇಟೋ, ನಾಲ್ಕು ಆಲೂಗೆಡ್ಡೆಗೆ ನೂರು ರೂಪಾಯಿ ಕೊಟ್ಟಾಗ ಇದೇ ಇಪ್ಪತ್ತು ರೂಪಾಯಿ ಅನಾಮಿಕ ಕೊಟ್ಟಿದ್ದ. ಬೇಕರಿಯ ಮಾಲೀಕ ಇದನ್ನು ಕಣ್ಣಿಗೆ ಒತ್ತಿಕೊಂಡು ಗಲ್ಲಾ ಪೆಟ್ಟಿಗೆಯಲ್ಲಿ ಸೇರಿಸಿದ. ಇದೇ ರೀತಿ ಯಾರು ಯಾರಿಗೋ ಸೇರಿದ, ಯಾರಿಗೋ